ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೩**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೇ ಅಧಿವೇಶನ**

**ಶುಕ್ರವಾರ, ದಿನಾಂಕ: ೨೧ನೇ ಮಾರ್ಚ್, ೨೦೨೫**

---

**ಸಮೂಹ – V**

೧. ಸಮಾಜ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

೩. ಕೃಷಿ ಸಚಿವರು

೪. ಕಾರ್ಮಿಕ ಸಚಿವರು

೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

## ಬಾಲಭವನದ ಆಸ್ತಿಯನ್ನು ಒತ್ತುವರಿ ಮಾಡಿಕೊಂಡಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೧ (೧೫೩೦) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಲಭವನವು ರಾಜ್ಯದ ಎಷ್ಟು ಜಿಲ್ಲೆಗಳಲ್ಲಿವೆ ಹಾಗೂ ಇವುಗಳು ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಷ್ಟು ಎಕರೆ ಜಮೀನನ್ನು ಹೊಂದಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಮಕ್ಕಳ ಚಟುವಟಿಕೆಗಾಗಿ ಮೀಸಲಿಟ್ಟಿರುವ ಜಾಗದಲ್ಲಿ ಯಾವ ಯಾವ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ; ಮಕ್ಕಳ ಚಟುವಟಿಕೆಗಾಗಿ ಇಲಾಖಾ ವತಿಯಿಂದ ಎಷ್ಟು ಸಿಬ್ಬಂದಿಗಳನ್ನು ನೇಮಿಸಲಾಗಿದೆ ;

(ಇ) ಅಧಿಕಾರಿಗಳ ನಿರ್ಲಕ್ಷ್ಯ, ನಿರ್ವಹಣೆ ಕೊರತೆಯಿಂದ ಬಾಲಭವನದ ನೂರಾರು ಎಕರೆ ಭೂಮಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದೆ ; ಹಾಗೂ ಎಷ್ಟು ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಈ) ಪ್ರಸ್ತುತ ಇರುವಂತಹ ಬಾಲಭವನದಲ್ಲಿರುವ ಮಕ್ಕಳ ಆಟಿಕೆ ಸಾಮಾನುಗಳು ಬಹುತೇಕವಾಗಿ ಕೆಟ್ಟು ತುಕ್ಕು ಹಿಡಿದಿರುವುದನ್ನು ಅಧಿಕಾರಿಗಳು ಗಮನಹರಿಸಿದ್ದಾರೆಯೇ ; ಹಾಗಿದ್ದಲ್ಲಿ, ತೆಗೆದುಕೊಂಡ ಕ್ರಮವೇನು ?

## ಸಿಬ್ಬಂದಿ ಕೊರತೆಯ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೮೨ (೧೫೪೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳಲ್ಲಿ ಸಿಬ್ಬಂದಿ

ವರ್ಗದ ಕೊರತೆ ಹಾಗೂ ಇಲಾಖೆಯಲ್ಲಿನ ಕಾರ್ಯಾಚರಣೆಗೆ ಬೇಕಾಗಿರುವ ಮೂಲಸೌಲಭ್ಯ/ಸೌಕರ್ಯಗಳನ್ನು ಸುವ್ಯವಸ್ಥಿತವಾಗಿ ಒದಗಿಸಿಲ್ಲದ ಕಾರಣ ಯೋಜನಾನುಷ್ಠಾನದಲ್ಲಿ ಎದುರಿಸುತ್ತಿರುವ ಅನಾನುಕೂಲಗಳನ್ನು ಪರಿಹರಿಸುವಲ್ಲಿ ಸರ್ಕಾರದ ಕ್ರಮಗಳು ಯಾವುವು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಮೂಲಭೂತ ಸೌಕರ್ಯಗಳನ್ನು ಮತ್ತು ಸೇವೆಯನ್ನು ಶೀಘ್ರವಾಗಿ ಒದಗಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅದರಡಿಯಲ್ಲಿ ಕೆಲವೊಂದು ಇಲಾಖೆಯನ್ನು ಸೃಷ್ಟಿಸಿದ್ದು, ಸದರಿ ಇಲಾಖೆಗಳಲ್ಲಿ ಮಾನವ ಸಂಪನ್ಮೂಲದ ಕೊರತೆಯಿರುವುದು ಸರ್ಕಾರದ ಗಮನದಲ್ಲಿದೆಯೇ ; ಹಾಗಿದ್ದಲ್ಲಿ, ಸಂಪನ್ಮೂಲದ ಕೊರತೆಯನ್ನು ಯಾವ ಕಾಲಮಿತಿಯೊಳಗೆ ಸರ್ಕಾರ ಬಗೆಹರಿಸುವುದು ; (ಪೂರ್ಣ ಮಾಹಿತಿ ನೀಡುವುದು)

(ಇ) ಕೋಲಾರ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ? (ಅಧಿಕಾರಿ ವೃಂದವಾರು, ಇಲಾಖೆವಾರು, ಸರ್ಕಾರಿ ಮತ್ತು ಹೊರ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಪೂರ್ಣ ಮಾಹಿತಿ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಂಡಿರುವ ಯೋಜನೆಗಳ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೩ (೧೫೨೭) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಯಾವ ಯಾವ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ ;

(ಆ) ಅನುಷ್ಠಾನಗೊಂಡಿರುವ ಯೋಜನೆಗಳು ಯಾವ ಹಂತದಲ್ಲಿವೆ ; ಯೋಜನೆಗಳಿಗೆ ಮಂಜೂರಾಗಿರುವ ಅನುದಾನವೆಷ್ಟು ;

(ಇ) ಸಿಂಧನೂರು ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಶಾಲೆ ಮತ್ತು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಈ) ಸರ್ಕಾರದ ಕಟ್ಟಡಗಳಲ್ಲಿ ಹಾಗೂ ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆ/ಕಾಲೇಜುಗಳು ಹಾಗೂ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು ;

(ಉ) ಇಲಾಖೆಯ ಶಿಕ್ಷಣ ಸಂಸ್ಥೆಗಳಲ್ಲಿ ಮಂಜೂರಾಗಿರುವ ಹಾಗೂ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಊ) ಈ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ನೀಡುವ ಸೌಕರ್ಯಗಳನ್ನು ಉನ್ನತೀಕರಿಸಲು ಯಾವ ಕ್ರಮಕೈಗೊಳ್ಳಲಾಗಿದೆ ?

## ಚಿತ್ರದುರ್ಗ ಜಿಲ್ಲೆಯಲ್ಲಿರುವ ಆಹಾರ ಉತ್ಪಾದನಾ ಘಟಕದ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೮೪ (೧೫೩೭) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಂಗನವಾಡಿಗಳಿಗೆ ಆಹಾರ ಪೂರೈಕೆ ಮಾಡಲು ಚಿತ್ರದುರ್ಗ ಜಿಲ್ಲೆಯಲ್ಲಿ ಉತ್ಪಾದನಾ ಘಟಕವನ್ನು ಯಾವಾಗ ತೆರೆಯಲಾಗಿತ್ತು ;

(ಆ) ಈ ಘಟಕವನ್ನು ಸರ್ಕಾರ ಸ್ಥಗಿತಗೊಳಿಸಿದೆಯೇ ಅಥವಾ ಮುಂದುವರೆಸುತ್ತಿದೆಯೇ ; ಸ್ಥಗಿತಗೊಳಿಸಿದ್ದರೇ ಕಾರಣವನ್ನು ಒದಗಿಸುವುದು ; (ವಿವರ ಒದಗಿಸುವುದು)

(ಇ) ಆಹಾರ ಉತ್ಪನ್ನಗಳನ್ನು ಈಗ ಸರ್ಕಾರ ಹೊರರಾಜ್ಯದಿಂದ ಖರೀದಿ ಮಾಡುತ್ತಿದೆಯೇ ; ಮಾಡುತ್ತಿದ್ದರೆ, ಯಾವ ಯಾವ ಉತ್ಪನ್ನಗಳನ್ನು ಯಾವ ಯಾವ ಬೆಲೆಗೆ ಮಾಡಲಾಗುತ್ತಿದೆ ? (ಪ್ರತಿಯೊಂದು ಉತ್ಪನ್ನಗಳ ಬೆಲೆಯ ವಿವರ ನೀಡುವುದು)

## ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆಸ್ತಿಗಳಿಗೆ ಇ–ಖಾತಾ ವಿತರಿಸುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ ) –**

೧೮೫ (೧೬೧೦) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮಗಳ ಗ್ರಾಮಠಾಣಾ ಗಡಿಯನ್ನು ಗುರುತಿಸಿ/ನಿಗದಿ ಪಡಿಸಿದ್ದು ಯಾವಾಗ ; ಅಂದಿನ ರಾಜ್ಯದ ಜನಸಂಖ್ಯೆ ಎಷ್ಟು ಮತ್ತು ಪ್ರಸ್ತುತ ರಾಜ್ಯದ ಜನಸಂಖ್ಯೆ ಎಷ್ಟು ;

(ಆ) ಗ್ರಾಮಠಾಣಾ ವ್ಯಾಪ್ತಿಯಲ್ಲಿ ಮನೆ ನಿರ್ಮಾಣಕ್ಕೆ ಸ್ಥಳವಿಲ್ಲದ ಕಾರಣ ಗ್ರಾಮೀಣ ಪ್ರದೇಶದ ಜನತೆ ಕಂದಾಯ ಭೂಮಿಯಲ್ಲಿ ಮನೆ ನಿರ್ಮಾಣ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸದರಿ ಕಂದಾಯ ಭೂಮಿಯಲ್ಲಿ ನಿರ್ಮಾಣ ಮಾಡಿಕೊಳ್ಳುತ್ತಿರುವ ಮನೆಗಳಿಗೆ ಸರ್ಕಾರದ ವತಿಯಿಂದ ಇ–ಖಾತಾ ನೀಡಲಾಗುತ್ತಿದೆಯೇ ;

(ಇ) ಯಾವ ಪ್ರಕಾರದ ಆಸ್ತಿಗಳಿಗೆ ಬಿ–ಖಾತಾ ನೀಡಲಾಗುತ್ತಿದೆ ಮತ್ತು ಯಾವ ದಿನಾಂಕದ ನಂತರ ಸೃಜನೆಯಾದ ಆಸ್ತಿಗಳಿಗೆ ಬಿ–ಖಾತಾ ನೀಡಲಾಗುತ್ತಿದೆ ; ಬಿ–ಖಾತಾ ನೀಡಲು ಪಡೆಯುತ್ತಿರುವ ದಾಖಲೆಗಳು ಯಾವುವು ;

(ಈ) ಸದರಿ ಬಿ–ಖಾತಾಗಳನ್ನು ಯಾವ ಉದ್ದೇಶಗಳಿಗೆ ಬಳಸಬಹುದು ಹಾಗೂ ಇವುಗಳಿಂದ ಖಾತಾದಾರರಿಗೆ ಆಗುವ ಅನುಕೂಲಗಳೇನು ;

(ಉ) ಹಲವು ಗ್ರಾಮ ಪಂಚಾಯಿತಿಗಳು ಹಸಿರುವಲಯದ ಕಾರಣ ನೀಡಿ ಇ–ಖಾತಾ ನೀಡದೆ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಈ ರೀತಿಯ ಸ್ವತ್ತುಗಳಿಗೆ ಇ–ಖಾತಾ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಸ್ವತ್ತುಗಳಿಗೆ ತುರ್ತಾಗಿ/ ಆಂದೋಲನದ ಮಾದರಿಯಲ್ಲಿ ಇ–ಖಾತಾ ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ವಸತಿ ನಿಲಯಗಳ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೮೬ (೧೫೯೬) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ–ಉಡುಪಿ ಜಿಲ್ಲೆಗಳಲ್ಲಿ ಇರುವ ಹಿಂದುಳಿದ ವರ್ಗಗಳ ವಸತಿ ನಿಲಯಗಳ ಸಂಖ್ಯೆ ಎಷ್ಟು ; ಈ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳೆಷ್ಟು ; ವಸತಿ ನಿಲಯಗಳಿಗೆ ಈ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿಗಳು ವಸತಿ ನಿಲಯಕ್ಕಾಗಿ ಅರ್ಜಿ ಸಲ್ಲಿಸಿದ್ದರು ; ಎಷ್ಟು ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗಿದೆ ; ಅರ್ಜಿ ಸಲ್ಲಿಸಿ ದಾಖಲಾತಿ ಸಿಗದೇ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಆ) ಮಂಗಳೂರು ನಗರದಲ್ಲಿ ವಿದ್ಯಾರ್ಥಿ ವಸತಿ ನಿಲಯಗಳಿಗೆ ಹೆಚ್ಚಿನ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಲ್ಲಿ ಕೆಲವು ವಿದ್ಯಾರ್ಥಿಗಳು ವಸತಿ ನಿಲಯ ದೊರಕದೆ ಪಿ.ಜಿ.ಗಳಲ್ಲಿ ದುಬಾರಿ ವೆಚ್ಚ ಪಾವತಿಸಿ ವಿದ್ಯಾಭ್ಯಾಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಮುಂದಿನ ದಿನಗಳಲ್ಲಿ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ದಾಖಲಾತಿ ಹೆಚ್ಚು ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ; ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯ ಹೆಚ್ಚಿಸಲು ಏನು ಕ್ರಮ ವಹಿಸಲಾಗಿದೆ ;

(ಇ) ಸದರಿ ಜಿಲ್ಲೆಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಇರುವ ವಸತಿ ನಿಲಯಗಳು ಎಷ್ಟು ; ಈ ಸಾಲಿನಲ್ಲಿ ಎಷ್ಟು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಕ್ರಮ ವಹಿಸಲಾಗಿದೆ ; ಹೊಸ ಕಟ್ಟಡಗಳ ನಿರ್ಮಾಣ/ಕಟ್ಟಡ ದುರಸ್ತಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ ? (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

## ಅಪೌಷ್ಟಿಕ ಮಕ್ಕಳ ದತ್ತು ಯೋಜನೆ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೬ (೧೫೧೨) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೦೬ ವರ್ಷದೊಳಗಿನ ಮಕ್ಕಳಲ್ಲಿ ತೀವ್ರ ಮತ್ತು ಸಾಧಾರಣ ಅಪೌಷ್ಟಿಕತೆ ಇರುವ ಮಕ್ಕಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಅಪೌಷ್ಟಿಕ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಯೋಜನೆ ಜಾರಿಯಲ್ಲಿದೆಯೇ ; ಹಾಗಿದ್ದಲ್ಲಿ, ಸದರಿ ಯೋಜನೆಯಡಿ ಎಷ್ಟು ಅಪೌಷ್ಟಿಕ/ಸಾಧಾರಣಾ ಅಪೌಷ್ಟಿಕ ಮಕ್ಕಳನ್ನು ದತ್ತು ತೆಗೆದುಕೊಳ್ಳಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಮಕ್ಕಳಲ್ಲಿ ಅಪೌಷ್ಟಿಕತೆ ತಗ್ಗಿಸಲು ಸರ್ಕಾರ ಜಾರಿ ಮಾಡಿರುವ ವಿವಿಧ ಯೋಜನೆಗಳಾವುವು ; ಸದರಿ ಯೋಜನೆಗಳಿಗೆ ೨೦೨೪–೨೫ನೇ ಸಾಲಿನಲ್ಲಿ ಕಾಯ್ದಿರಿಸಿದ, ಬಿಡುಗಡೆಯಾದ ಮತ್ತು ಖರ್ಚಾದ ಮೊತ್ತ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಮಕ್ಕಳಲ್ಲಿ ಅಪೌಷ್ಟಿಕತೆ ತಗ್ಗಿಸಲು ಇರುವ ಸರ್ಕಾರ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಕೈಗೊಂಡಿರುವ ಕ್ರಮಗಳೇನು ?

## ಮೊಬೈಲ್ ಮೆಡಿಕಲ್ ಯೂನಿಟ್ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೮ (೧೫೧೯) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ಮೊಬೈಲ್ ಮೆಡಿಕಲ್ ಯುನಿಟ್ ಸೇವೆಯನ್ನು ಯಾವ ಸಂಸ್ಥೆಯವರು ನೀಡುತ್ತಿದ್ದಾರೆ ; ಅವರು ಎಷ್ಟು ವಾಹನಗಳನ್ನು ತಮ್ಮ ಸಂಸ್ಥೆಯ ಹೆಸರಿಗೆ ಖರೀದಿಸಿದ್ದಾರೆ ; (ವಾಹನವನ್ನು ಖರೀದಿಸಿ ಮೊಬೈಲ್ ಮೆಡಿಕಲ್ ಯುನಿಟ್ ಆಗಿ ಪರಿವರ್ತಿಸಿರುವ ಬಗ್ಗೆ ಎಲ್ಲಾ ದಾಖಲೆಗಳೊಂದಿಗೆ ಸಮಗ್ರ ಮಾಹಿತಿ ನೀಡುವುದು)

(ಆ) ಮೊಬೈಲ್ ಮೆಡಿಕಲ್ ಯುನಿಟ್ ಟೆಂಡರ್‌ನಲ್ಲಿ ದೊಡ್ಡ ಮೊತ್ತದ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಅವ್ಯವಹಾರ ನಡೆಸಿ ಬಡ ಕಟ್ಟಡ ಕಾರ್ಮಿಕರ ೧೮.೩೩ ಕೋಟಿ ರೂ.ಗಳ ಅವ್ಯವಹಾರ ನಡೆಸಿರುವ ಬಗ್ಗೆ ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಇ) ಮೊಬೈಲ್ ಮೆಡಿಕಲ್ ಯುನಿಟ್‌ಗೆ ಬೇಕಾದ ವಾಹನವನ್ನು ಹೊಂದದೆ ಇರುವ ಸ್ಕೋಡ್ ವೇಸ್ ಸಂಸ್ಥೆಯವರಿಗೆ ಟೆಂಡರ್ ನೀಡಿದ್ದು, ಬೇರೆಯವರ ಹೆಸರಲ್ಲಿ ಟ್ರಾವಲ್ಸ್‌ಗೆ ಸಂಬಂಧಿಸಿದ ಸೆಕೆಂಡ್ ಹ್ಯಾಂಡ್ ವಾಹನಗಳ ದಾಖಲೆಗಳನ್ನು ಸಲ್ಲಿಸಿ ಟೆಂಡರ್ ಪಡೆದಿರುವ ಬಗ್ಗೆ ಸರ್ಕಾರದ ನಿಲುವೇನು ?

## ಮಹಾತ್ಮ ಗಾಂಧಿ ನರೇಗಾ–ಕೂಲಿ ಮೊತ್ತ ಪಾವತಿ ಆಗದಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ ) –**

೧೮೯ (೧೩೪೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಮೊತ್ತ ಹಾಗೂ ಸಾಮಗ್ರಿ ಮೊತ್ತ ಬಿಡುಗಡೆ ಆಗದಿರುವುದರಿಂದ ಕೂಲಿಕಾರರಿಗೆ ಹಾಗೂ ಸಾಮಗ್ರಿ ಸರಬರಾಜುದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪಾವತಿಸಲು ಬಾಕಿಯಿರುವ ಕೂಲಿ ಸಾಮಗ್ರಿ ಮೊತ್ತವೆಷ್ಟು ; (ಕೂಲಿಕಾರರ ಸಂಖ್ಯೆ ಮತ್ತು ಸರಬರಾಜುದಾರರ ಸಂಖ್ಯೆಯೊಂದಿಗೆ ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಪಾವತಿಸಲು ಬಾಕಿಯಿರುವ ಕೂಲಿ ಮತ್ತು ಸಾಮಗ್ರಿ ಬಿಲ್ಲಿನ ಮೊತ್ತದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಪಾಲಿನ ಮೊತ್ತವೆಷ್ಟು ;

(ಈ) ಓಂಬಡ್ಸ್‌ಮನ್ ಆದೇಶದ ಮೇರೆಗೆ ೨೦೧೦ ರಿಂದ ಈವರೆವಿಗೂ ವಸೂಲಾತಿ ಮಾಡಲಾದ ಮೊತ್ತವೆಷ್ಟು ; ಹಾಗೂ ವಿಲೇಯಾದ ಪ್ರಕರಣಗಳು, ಸಾಬೀತಾದ ಪ್ರಕರಣಗಳು, ವಸೂಲಾತಿಗೆ ಶಿಫಾರಸ್ಸು ಮಾಡಲಾದ ಪ್ರಕರಣಗಳು, ವಸೂಲಾತಿ ಮಾಡಬೇಕಾದ ಒಟ್ಟು ಮೊತ್ತ ಹಾಗೂ ವಸೂಲಾತಿಗೆ ಬಾಕಿಯಿರುವ ಒಟ್ಟು ಮೊತ್ತವೆಷ್ಟು ? (ಶೇಕಡಾವಾರು–ಜಿಲ್ಲಾವಾರು ಮತ್ತು ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೯೦ (೧೫೮೪) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು ; ಪ್ರಸ್ತುತ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನಲ್ಲಿ ಫೆಬ್ರವರಿ ೨೦೨೫ರ ಅಂತ್ಯಕ್ಕೆ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನೀಡುವ ಸಂಭ್ರಮ ಕಿಟ್, ಶುಚಿತ್ವ ಕಿಟ್‌ಗಳು, ಶೂ, ಸಾಕ್ಸ್, ಸಮವಸ್ತ್ರ ಇತ್ಯಾದಿ ವಸ್ತುಗಳು ಇಲ್ಲಿಯವರೆಗೆ ತಲುಪದಿರುವ ವಿಷಯ ಸರ್ಕಾರದ

ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು ; ವಿಳಂಬಕ್ಕೆ ಕಾರಣಗಳೇನು ; ಒಂದು ವೇಳೆ ವಿತರಿಸುವ ಹಂತದಲ್ಲಿದ್ದರೆ ಯಾವ ಸಮಯದಿಂದ ಕಿಟ್‌ಗಳನ್ನು ವಿತರಿಸಲಾಗುತ್ತದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಕಿಟ್‌ಗಳನ್ನು ನೀಡಲು ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗುತ್ತಿದೆ ; ಏಪ್ರಿಲ್–೨೦೨೩ ರಿಂದ ಇಲ್ಲಿಯವರೆಗೆ ಫೆಬ್ರವರಿ–೨೦೨೫ ಅಂತ್ಯಕ್ಕೆ ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ ; (ವರ್ಷವಾರು ಮಾಹಿತಿ ನೀಡುವುದು) ಕಿಟ್‌ನಲ್ಲಿ ಯಾವ ಯಾವ ವಸ್ತುಗಳನ್ನು ಸರಬರಾಜು ಮಾಡಲಾಗುತ್ತದೆ ; ಪ್ರತಿ ವಸ್ತುಗಳಿಗನುಗುಣವಾಗಿ ದರಗಳ ಪ್ರತ್ಯೇಕ ಮಾಹಿತಿ ನೀಡುವುದು ;

(ಈ) ಪ್ರಸ್ತುತ ಕಿಟ್‌ಗಳನ್ನು ವಿತರಿಸುವ ಕಾರ್ಯ ಯಾವ ಹಂತದಲ್ಲಿದೆ ; ಕಿಟ್‌ಗಳನ್ನು ನೀಡಲು ವಿಳಂಬವಾದರೇ ವಿದ್ಯಾರ್ಥಿಗಳಿಗೆ ಶುಚಿತ್ವಕ್ಕೆ ತೊಂದರೆಯಾಗಿ ಪರಿಣಮಿಸುವುದಿಲ್ಲವೇ ; ಕಾಲಕಾಲಕ್ಕೆ ಕಿಟ್‌ಗಳನ್ನು ಸರಬರಾಜು ಮಾಡದಿರಲು ಕಾರಣಗಳೇನು ; ಶೈಕ್ಷಣಿಕ ವರ್ಷ ಮುಗಿದ ಮೇಲೆ ವಿತರಿಸುವ ಕಾರ್ಯ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದಿಲ್ಲವೇ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಸದರಿ ವಸತಿ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಹಾಗೂ ಇನ್ನಿತರ ವಿದ್ಯಾರ್ಥಿಗಳ ಉಪಯುಕ್ತ ವಸ್ತುಗಳನ್ನು ಸರಿಯಾದ ಸಮಯದಲ್ಲಿ ಸರಬರಾಜು ಮಾಡಲಾಗಿದೆಯೇ ; ಮಾಡಿದ್ದಲ್ಲಿ ದಾಖಲೆಗಳ ಸಮೇತ ಮಾಹಿತಿ ನೀಡುವುದು ; ಇಲ್ಲದಿದ್ದಲ್ಲಿ, ಯಾವ ಕಾರಣಕ್ಕಾಗಿ ವಿಳಂಬ ಮಾಡಲಾಗುತ್ತಿದೆ ; ವಿಳಂಬ ಧೋರಣೆಯಿಂದ ಮಕ್ಕಳ ಶೈಕ್ಷಣಿಕ ಜೀವನಕ್ಕೆ ತೊಂದರೆ ಮಾಡಿದಂತಾಗುವುದಿಲ್ಲವೇ ?

# ಆದಾಯ ಪ್ರಮಾಣ ಪತ್ರಗಳಲ್ಲಿ ಪೋಷಕರ ಆದಾಯ ಪರಿಗಣಿಸುವ ಕುರಿತು

**ಡಾ: ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೯೧ (೧೫೭೭) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆದಾಯ ಪ್ರಮಾಣ ಪತ್ರಗಳಲ್ಲಿ ‘‘ಪೋಷಕರ ಆದಾಯ’’ ಪರಿಗಣಿಸುವ ಬದಲು ‘‘ಕುಟುಂಬ ಆದಾಯ’’ ಪರಿಗಣಿಸುತ್ತಿರುವುದರಿಂದ ಹಿಂದುಳಿದ ವರ್ಗಗಳ ಉದ್ಯೋಗಾಕಾಂಕ್ಷಿಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೇಂದ್ರ ಸರ್ಕಾರವು ಓಬಿಸಿ ಪ್ರಮಾಣ ಪತ್ರಗಳಲ್ಲಿ ‘‘ಪೋಷಕರ ಆದಾಯ’’ ಪರಿಗಣಿಸುತ್ತಿದ್ದು, ಆದರೆ ರಾಜ್ಯ ಸರ್ಕಾರವು ಆದಾಯ ಪ್ರಮಾಣ ಪತ್ರಗಳಿಗೆ ‘‘ಕುಟುಂಬ ಆದಾಯ’’ವನ್ನು ಪರಿಗಣಿಸುತ್ತಿರುವುದು ಸರಿಯೇ ? (ವಿವರ ನೀಡುವುದು)

# ಅಂಗವಿಕಲರ ಅಧಿನಿಯಮ–೨೦೧೬ ಅನ್ನು ಜಾರಿಗೊಳಿಸುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೯೨ (೧೫೧೪) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–೨೦೧೬ರ ಸೆಕ್ಷನ್ ೩೭ರ ರೀತ್ಯಾ ಸರ್ಕಾರದ ಎಲ್ಲಾ ಇಲಾಖೆಗಳು ತನ್ನ ಅಭಿವೃದ್ಧಿ ಯೋಜನೆಯ ಒಟ್ಟು ಆಯವ್ಯಯದಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಶೇ.೫ ರಷ್ಟು ಮೀಸಲಾತಿ ನೀಡಿದೆಯೇ ; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–೨೦೧೬ರ ಸೆಕ್ಷನ್ ೩೭ರ ರೀತ್ಯಾ ಯಾವ ಯಾವ ಇಲಾಖೆಗಳಲ್ಲಿ ಶೇ.೫ ರಷ್ಟನ್ನು ವಿಕಲಚೇತನ ವ್ಯಕ್ತಿಗಳಿಗೆ ಅನುದಾನ ಮೀಸಲಿಟ್ಟು ಆದೇಶ ಹೊರಡಿಸಲಾಗಿರುತ್ತವೆ ; (ಪೂರ್ಣ ಮಾಹಿತಿ ಒದಗಿಸುವುದು)

(ಇ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ–೨೦೧೬ರ ಅಂಗವಿಕಲರ ಕಲ್ಯಾಣಕ್ಕಾಗಿ ಪ್ರತ್ಯೇಕವಾಗಿ ಉಪ ಲೆಕ್ಕಶೀರ್ಷಿಕೆಯನ್ನು ಸೃಜಿಸಿ ಶೇ.೫% ರಷ್ಟು ಆಯವ್ಯಯ ಮೀಸಲಿಡುವ ಬಗ್ಗೆ ಸರ್ಕಾರ ಆದೇಶ ಹೊರಡಿಸುವುದೇ ? (ವಿವರಗಳೊಂದಿಗೆ ಪೂರ್ಣ ಮಾಹಿತಿ ಒದಗಿಸುವುದು)

## ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರು ಒದಗಿಸುವ ಯೋಜನೆಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ ) –**

೧೯೩ (೧೫೭೮) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಅತ್ತನೂರು ಗ್ರಾಮಕ್ಕೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಕಾಮಗಾರಿ ಕೈಗೆತ್ತಿಕೊಂಡಿದೆಯೇ ; ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ; (ಸಂಪೂರ್ಣ ವಿವರಣೆ ನೀಡುವುದು)

(ಆ) ಸದರಿ ಗ್ರಾಮಕ್ಕೆ ಜೆಜೆಎಂ ಹಾಗೂ ಇನ್ನಿತರೆ ಯಾವುದಾದರು ಯೋಜನೆಗಳಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆಯೇ ; ಈ ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ ; ಮುಂದಿನ ಕ್ರಮಗಳೇನು ; (ವಿವರಣೆ ನೀಡುವುದು)

(ಇ) ಒಂದೇ ಗ್ರಾಮದ ಒಂದೇ ವಸತಿ ಪ್ರದೇಶಕ್ಕೆ ಒಂದಕ್ಕಿಂತ ಹೆಚ್ಚು ಯೋಜನೆಗಳಡಿ (ಬಹುಗ್ರಾಮ ಕುಡಿಯುವ ನೀರು ಯೋಜನೆ ಮತ್ತು ಜೆಜೆಎಂ ಅಡಿಯಲ್ಲಿ) ಕಾಮಗಾರಿಗೆ ಅನುಮೋದನೆ ನೀಡಲು ಕಾರಣವೇನು ; ಸದರಿ ಕಾಮಗಾರಿಗಳು ಯಶಸ್ವಿಯಾಗಿವೆಯೇ ; (ವಿವರ ನೀಡುವುದು)

(ಈ) ಸದರಿ ಗ್ರಾಮದ ಕುಡಿಯುವ ನೀರಿಗಾಗಿ ಉದ್ದೇಶಿತ ಯೋಜನೆಗಳಿಗೆ ನಿಗದಿಪಡಿಸಿದ ಅನುದಾನದ ವಿವರ ಮತ್ತು ಖರ್ಚಾದ ಹಣದ ಹಾಗೂ ಕಾಮಗಾರಿಗಳಿಗೆ ನಿಗದಿಪಡಿಸಿದ ಸಮಯ ಎಷ್ಟು ; (ವಿವರಣೆ ನೀಡುವುದು)

(ಉ) ಎಂವಿಎಸ್ (ಬಹುಗ್ರಾಮ ಕುಡಿಯುವ ನೀರಿನ) ಯೋಜನೆಯಡಿ ನಿರ್ಮಿಸಲು ಕೈಗೆತ್ತಿಕೊಂಡಿರುವ ಕೆರೆ ನಿರ್ಮಾಣ ಕಾರ್ಯ ಪೂರ್ಣಗೊಳಿಸದೆ ಇರಲು ಕಾರಣವೇನು ; ಸದರಿ ಕೆರೆಯನ್ನು ಪೂರ್ಣಗೊಳಿಸಿ ಅತ್ತನೂರು ಗ್ರಾಮಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಲ್ಲಿ ಇರುವ ಸಮಸ್ಯೆಗಳೇನು ; ಯಾವ ಕಾಲಮಿತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು?

## ಹಾಸ್ಟೆಲ್ ಹಾಗೂ ವಸತಿ ಶಾಲಾ ಕಾಲೇಜುಗಳ ಹೊರಗುತ್ತಿಗೆ ಸಿಬ್ಬಂದಿಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೯೪ (೧೫೧೩) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ, ಜಿಲ್ಲಾ ಸಮಿತಿ, ಕಲಬುರಗಿ ಇವರ ಬೇಡಿಕೆಗಳೇನು ;

(ಆ) ಹಾಸ್ಟೆಲ್ ಹಾಗೂ ವಸತಿ ಶಾಲೆ ಕಾಲೇಜುಗಳ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಹಾಗೂ ಇತರ ೭ ಬೇಡಿಕೆಗಳ ಬಗ್ಗೆ ಸರ್ಕಾರ ಸ್ಪಂದಿಸಿ ಅವರ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಮುಂದಾಗುವುದೇ ?

## ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದಲ್ಲಿರುವ ಜೆ.ಪಿ. ಸಿಮೆಂಟ್ ಕಂಪನಿ ಉತ್ಪಾದನೆ ಸ್ಥಗಿತಗೊಂಡಿರುವ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೧೯೫ (೧೫೩೪) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದಲ್ಲಿರುವ ಸಿಮೆಂಟ್ ಕಂಪನಿ ಉತ್ಪಾದನೆ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು ;

(ಆ) ಶಹಾಬಾದ ಸಿಮೆಂಟ್ ಕಂಪನಿ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಯಾಗಿದ್ದು ಎಸಿಸಿ ಒಡೆತನಕ್ಕೆ ಸೇರಿದ್ದಾಗಿದ್ದು, ೭ ದಶಕಗಳ ಕಾಲ ಶಹಾಬಾದ/ ಸುತ್ತ ಮುತ್ತಲಿನ ಗ್ರಾಮಗಳಲ್ಲಿನ ಕಾರ್ಮಿಕರಿಗೆ ಉದ್ಯೋಗ ನೀಡಿದ ಕಂಪನಿ ೧೯೯೭ ರಿಂದ ಉತ್ಪಾದನೆ ಸ್ಥಗಿತಗೊಳಿಸಿ ಕಾರ್ಮಿಕರನ್ನು ಬೀದಿಪಾಲಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸ್ವಾತಂತ್ರ್ಯ ಪೂರ್ವದಿಂದ ೧೯೯೦ರ ವರೆಗೆ ಎಸಿಸಿ, ೧೯೯೦ ರಿಂದ ೧೯೯೭ರ ವರೆಗೆ ಎಚ್‌ಎಂಪಿ ನಂತರ ಜೆ.ಪಿ ಒಡೆತನದಲ್ಲಿ ಕಂಪನಿ ಮಾಲೀಕತ್ವ ಬದಲಾವಣೆಯಾಗಿದ್ದು ಕಾರ್ಮಿಕರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿರುವುದನ್ನು ನಿಯಂತ್ರಿಸುವುದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ದೇಶದಲ್ಲಿಯೇ ಹಳೆಯದಾದ ಕಂಪನಿ ವಿಸ್ತಾರವಾದ ಸ್ಥಳ ಮತ್ತು ಗುಣಮಟ್ಟದ ಸುಣ್ಣದ ಕಲ್ಲಿನ ಸಂಪನ್ಮೂಲ ಹೊಂದಿದ ಈ ಕಂಪನಿಗೆ ಸರ್ಕಾರವು ಸ್ಪಂದಿಸಿ ಸಮಸ್ಯೆಗಳನ್ನು ಬಗೆಹರಿಸಿ ಕಾರ್ಮಿಕರ ಬದುಕಿಗೆ ಆಸರೆಯಾಗಲು ತಕ್ಷಣವೇ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ 932 – ಪಿ2

**List of Questions**
**for Oral Answers**

**Total No. of**
**Questions - 15**

# LIST -13

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Friday, the 21st March, 2025

---

### GROUP - V

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently Abled and Senior Citizens

---

**ENCROACHMENT OF THE PROPERTY OF BALA BHAVAN**

**Sri Govinda Raju (Elected by Legislative Assembly) -**

181 (1530) Will the Minister for Women and Child Development and Empowerment of Differently abled and Senior Citizens be pleased to state:-

a) the number of districts of the State in which Bala Bhavan is existing and the extent of acre of land thereof in each district; (districtwise details be furnished)

b) the particulars of activities which are being carried out in the land that has been reserved for the activities of children; the number of staff who have been appointed by the Department for the activities of children;

c) whether it has come to the notice of the Government that the extent of hundreds of acre of land of Bala Bhavan has been encroached due to the negligence and lack of maintenance by the officers; if so, the step that has been taken in this regard; and the extent of the land that has been taken into possession of the Government; (districtwise details be furnished)

d) whether the officers have noticed that most of the children toys in the Bala Bhavan almost damaged and have rusted at present; if so, the step taken in this regard?

**REGARDING SHORTAGE OF STAFF**

**Sri M.L. Anil Kumar (Local Authorities Constituency) -**

182 (1541) Will the Minister for Rural Development and Panchayat Raj and Information Technology and Bio-Technology be pleased to state:-

a) the measures of the Government to setright the inconveniences that are being faced in the implementation of the scheme due to the shortage of staff and not providing systematic basic facilities/ benefits that are required in the Panchayat Raj Engineering Department and the Rural Drinking Water and Sanitation Department in Kolar district; (complete information be furnished)

b) some Departments have been created under the Rural Development and Panchayat Raj Department to provide the basic facilities and service rapidly, whether it has come to the notice of the Government that there is a shortage of human resource in the said Department; if so, the timelimit within which the shortage of resource

would be resolved by the Government; (complete information be furnished)

c) the number of staff who are working in the Panchayat Raj Engineering Department and the Rural Drinking Water and Sanitation Department in Kolar district? (the complete information of cadrewise departmentwise officers and the Government and outsource staff who are working be furnished)

## SCHEMES IMPLEMENTED BY THE SOCIAL WELFARE DEPARTMENT

**Sri Basanagouda Badarli (Elected by Legislative Assembly) -**

183(1527) Will the Minister for Social Welfare be pleased to state:-

a) the particulars of schemes that have been implemented in Sindhanur taluk by the Social Welfare Department;

b) the present stage of the schemes that have been implemented; the grant that has been provided for the schemes;

c) the number of students who are studying in the schools and colleges of Social Welfare Department in Sindhanur taluk;

d) the number of schools/colleges and hostels which are functioning in the Government buildings and private buildings;

e) the number of posts that have been sanctioned and filled up and lying vacant in the educational institutions of the department;

f) the step that has been taken to upgrade the facilities that is being provided for the students in these hostels?

## FOOD PRODUCTION UNIT IN CHITRADURGA DISTRICT

**Sri K.S.Naveen (Local Authorities Constituency) -**

184(1537) Will the Minister for Women and Child Development and Empowerment of Differently abled and Senior Citizens be pleased to state:-

a) the date on which the food production unit was commenced in Chitradurga District to supply the food for Anganwadies;

b) whether the Government has closed this unit or being continued; if closed, the reasons be furnished; (details be furnished)

c) whether the food products is being purchased by the Government from other State at present; if so, the particulars of products and the price in which these are being purchased? (details of price of each products be furnished)

## PROVIDING E-KHATA FOR PROPERTIES IN THE LIMITS OF GRAM PANCHAYAT

**Sri Chidanand M.Gowda(Graduates' Constituency) -**

185(1610) Will the Minister for Rural Development and Panchayat Raj and Information Technology and Bio-Technology be pleased to state:-

a) the date on which the boundary of Gram Tana of villages of the State has been identified/prescribed; the population of the State in those days and the population of the State at present;

b) whether it has come to the notice of the Government that the people of rural area are constructing the house in the revenue land due to non availability of land to construct the house in the limit of Gram Tana; whether E-Khata is being provided by the Government for the houses that are being constructed in the said revenue land;

c) the kinds of properties for which B-Khata is being provided and the date after which the properties have been created for which B-Khata is being provided; the particulars of documents that are received to provide B-Khata;

d) the purpose for which the said B-Khatas would be used and the benefits for Khata holders from the same;

e) whether it has come the notice of the Government that the hardship is being faced by public due to non issuance of E-Khata by stating the reason of green zone by several Gram Panchayats; if so, the step taken by the Government to provide E-Khata for such kind of properties;

f) the steps taken by the Government to provide E-Khata rapidly as a drive for all properties in the limit of Gram Panchayat?

## REGARDING HOSTELS

**Sri Kishor Kumar Puttur (Local Authorities Constituency) -**

186 (1596) Will the Minister for Backward Classes Welfare and Kannada and Culture be pleased to state:-

a) the number of Backward Classes Hostels in Dakshina Kannada-Udupi districts; the number of students in these Hostels; the number of students from whom the applications have been submitted for the hostels in this year; the number of students who have got the abmission; the number of students who have not got the admission after submitting application;

b) whether it has come to the notice of the Government that there is a huge demand for the student hostels in Managaluru city; whether it has not come to the notice of the Government that there are some students who are studying in Managaluru are residing in P.G's by paying exorbitant cost without getting the admission

in the hostels; the step that would be taken by the Government to increase the admission of students in the hostels in future days; the step that has been taken to increase the basic facilities in the hostels;

c) the number of hostels which are functioning in rented buildings in the said districts; the number of new buildings for which the step has been taken for construction in this year; the grant that has been earmarked for the construction of new building/repair of building? (districtwise complete details be furnished)

## ADOPTION SCHEME FOR MALNUTRITION CHILDREN

**Sri Sharavana T.A.(Elected by Legislative Assembly) -**

187 (1512) Will the Minister for Women and Child Development and Empowerment of Differently abled and Senior Citizens be pleased to state:-

a) the number of severe and moderate malnutrition children under the age of 06 years in the State; (districtwise and talukwise information be furnished)

b) whether there is a scheme to adopt malnutrition children is being implemented in the State; if so, the number of malnutrition/moderate malnutrition children who have been adopted under the said scheme; (talukwise details be furnished)

c) the particulars of various schemes that have been implemented by the Government to reduce the malnutrition among children; the amount that has been earmarked, released and spent for the said scheme during the year 2024-25; (talukwise information be furnished)

d) the steps taken by the Government to implement the existing schemes effectively to reduce the malnutrition among children?

## REGARDING MOBILE MEDICAL UNIT

**Sri N.Ravikumar (Elected by Legislative Assembly) -**

188 (1519) Will the Minister for Labour be pleased to state:-

a) the particular of agencies from which the mobile medical unit service is being provided for building workers and their dependents who have registered in the Building Workers Welfare Fund; the number of vehicles they have been purchased in the name of their agency; (the comprehensive information along with all documents with regard to the purchased vehicle which are converted into the mobile medical unit be furnished)

b) the stand of the Government with regard to Rs. 18.55 crores of poor building workers has been misappropriated by occurring huge amount of corruption and nepotism in the tender of mobile medical unit; (details be furnished)

c) the tender has been awarded to the SCODWES organization which have not required vehicles for the mobile medical unit, the stand of the Government with regard to the tender has been obtained by submitting the documents of second hand vehicles belonging to the name of others travels?

## NON-PAYMENT OF WAGE OF MAHATAMA GANDHI NREGA

**Sri Madhu G.Madegowda (Graduates' Constituency) -**

189 (1546) Will the Minister for Rural Development and Panchayat Raj and Information Technology and Bio-Technology be pleased to state:-

a) whether it has come to the notice of the Government that the hardship is being caused for the labourers and material suppliers due to the wage and materials amount has not been released under Mahatma Gandhi National Rural Employment Guarantee Scheme;

b) if so, the amount of wage and materials pending for the payment; (districtwise information alongwith the number of labourers and suppliers be furnished)

c) the amount of share of the State Government and the Central Government in the outstanding amount of the wage and materials for the payment;

d) the amount that has been recovered from 2010 till date under the Ombudsman Order; and the number of disposed cases, proved cases, the cases that have been recommended for recovery, the total amount to be recovered and the total amount which is pending for recovery? (percentagewise-districtwise and talukwise information with regard to the Mandya district be furnished)

**RESIDENTIAL SCHOOLS UNDER THE SOCIAL WELFARE DEPARTMENT**

**Smt Hemalatha Nayak (Elected by Legislative Assembly) -**

190 (1584) Will the Minister for Social Welfare be pleased to state:-

a) the number of residential schools which are functioning under the Social Welfare Department; the number of students in the residential schools at present; (complete information be furnished)

b) whether it has come to the notice of the Government that the Sambhrama kits, hygiene kits, shoe, socks, uniform and etc’s items that will be provided to the students of residential schools every month have not reached till date from the years 2023-2024 and till the end of February-2024-25; if so, the steps taken by the Government; the reasons for the delay; if it is under the distribution stage the time from which the kits will be distributed; (complete information be furnished)

c) the amount that is being spent for providing the kits for the students every month; the amount that has been spent from April 2023 till date, till the end of February 2025; (yearwise information be furnished) the particulars of items are being supplied in the kit; the separate information of price according to each items be furnished;

d) the present stage of distribution of the kits at present; if there is a delay in the distribution of kits, whether it will cause problems for the hygiene of students; the reasons for not supplied the kits from time to time; whether it will cause loss to the exchequer of the Government due to the distribution work of kits have been carried out after completion of academic year; (complete information be furnished)

e) whether the textbooks and other useful materials of students have been supplied to the said residential schools on time; if so, the information alongwith documents be furnished; if not, the reasons for which the same has been delayed; whether it will cause hardship to the education of children due to the delay tactics?

## CONSIDERATION OF INCOME OF PARENTS IN INCOME CERTIFICATES

**Dr. Yathindra S (Elected by Legislative Assembly) -**

191 (1577) Will the Minister for Backward Classes Welfare and Kannada and Culture be pleased to state:-

a) whether it has come to the notice of the Government that the injustice is being caused to the job aspirants of backward classes due to "income of family" is being considered instead of "income of parents " in the income certificates;

b) the Central Government has considered "income of parents" in OBC certificates, whether it is correct that the State Government has considered "income of family" for the income certificates? (details be furnished)

## IMPLEMENTATION OF THE RIGHTS OF PERSONS WITH DISABILITIES ACT, 2016

**Sri Y.M.Satish (Local Authorities Constituency) -**

192 (1514) Will the Minister for Women and Child Development and Empowerment of Differently Abled and Senior Citizens be pleased to state:-

a) whether 5% of reservation has been provided for differently abled persons in the total budget of the development by all Department of the Government scheme as per the Section 37 of Rights of Persons with Disabilities Act, 2016; (information alongwith details be furnished)

b) the particulars of Departments in which the order has been issued by earmarking 5% of grant for the differently abled persons as per Section 37 of the Rights of Persons With Disabilities Act, 2016; (complete information be furnished)

c) whether the Government would issue the order regarding 5% of grant would be earmarked in the budget by creating the sub-heads of account separately for the welfare of differently abled persons as per the Rights of Persons With Disabilities Act, 2016? (complete information alongwith details be furnished)

## DRINKING WATER SUPPLY SCHEMES FOR ATTANUR VILLAGE OF SIRAWAR TALUK IN RAICHUR DISTRICT

**Sri Shashil G.Namoshi(Teachers' Constituency) -**

193 (1578) Will the Minister for Rural Development and Panchayat Raj and Information Technology and Bio-Technology be pleased to state:-

a) the steps taken by the Government to provide the drinking water to Attanur village of Sirawara taluk in Raichur district; whether the work has been taken up under Multi Village Drinking Water Scheme to Attanur

village; the present stage of the said works; (complete details be furnished)

b) whether the work has been taken up under the Jal Jeevan Mission (JJM) and any other schemes to the said village; the present stage of the said works; the further steps for the same; (details be furnished)

c) the reason for given the approval for the work under more than one scheme (under Multi Village Drinking Water Scheme and Jal Jeevan Mission (JJM)) for one residential area of one village; whether the said works have been succeeded ; (details be furnished)

d) the details of the grant that has been earmarked and spent for the proposed schemes for the drinking water of the said village and the time that has been prescribed for the works; (details be furnished)

e) the reasons for not completing the construction of lake that has been taken up under MVS Scheme (Multi Village Drinking Water Scheme); the prevailing issues for providing the permanent drinking water facility to Attanur village by completing the construction of said lake; the timelimit within which this issue would be resolved?

## OUTSOURCE STAFF OF HOSTELS AND RESIDENTIAL SCHOOLS AND COLLEGES

**Sri Thippanappa Kamaknoor (Elected by Legislative Assembly) -**

194 (1513) Will the Minister for Social Welfare be pleased to state:-

a) the details of demands of the Karnataka State Government Hostels and Residential Schools Outsource Employees Association, district committee, kalaburagi;

b) whether the Government would come forward to fulfill their all demands by responding with regard to the minimum wage and other 7 demands for outsource staff of hostels and schools and colleges?

## STOPPAGE OF PRODUCTION BY J.P CEMENT COMPANY

**Dr.Talwar Sabanna (Nominated) -**

195(1534) Will the Minister for Labour be pleased to state:-

a) the reasons for stopping of production of the cement company which is located in Shahabad town of Kalaburagi district;

b) Shahabad Cement Company was established in pre-independence and belonging to the possession of ACC and provided employment for labourers in Shahabad/ surrounding villages since 7 decades, whether it has come to the notice of the Government that the labourers are in distress condition without employments due to the stopping of the production of the company from 1997;

c) the proprietorship of the company has been changed since pre independence upto 1990 with ACC, from 1990 to 1997 with HMP and there after J.P, the measures taken by the Government to regulate the same which is playing with the life of labourers;

d) the measures that would be taken by the Government immediately to provide the support for the life of labourers by responding and resolving problems of the company which has wide space and quality limestone which is first of its kind in the nation?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD- Copies